# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 954 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 22.02.2024 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 2 ವರ್ಷಗಳ ಅವಧಿಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಯಲ್ಲಿ ಎಷ್ಟು ಅಕ್ರಮ ಮದ್ಯ ಮಾರಾಟ ಪ್ರಕರಣಗಳು ದಾಖಲಾಗಿವೆ; (ವಿವರ ಒದಗಿಸುವುದು) | ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಅಕ್ರಮ ಮದ್ಯ ಮಾರಾಟ ಸಂಬಂಧ ಕಳೆದ ಎರಡು ವರ್ಷಗಳಲ್ಲಿ ಅಂದರೆ 2021-22 ರಿಂದ 2022-23ನೇ ಅಬಕಾರಿ ಸಾಲುಗಳಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 32, 34 ರಡಿ ಒಟ್ಟು 2,124 ಘೋರ ಪ್ರಕರಣಗಳನ್ನು ಮತ್ತು 15(ಎ) ರನ್ವಯ ಒಟ್ಟು 13,926 ಪ್ರಕರಣಗಳನ್ನು ದಾಖಲಿಸಲಾಗಿದ್ದು, ಜಿಲ್ಲಾವಾರು ದಾಖಲಿಸಿದ ಮೊಕದ್ದಮೆಗಳ ವಿವರ ಕೆಳಕಂಡಂತಿದೆ. |

| ಕ್ರಸಂ | ಕಲ್ಯಾಣ ಕರ್ನಾಟಕ ಜಿಲ್ಲೆಗಳು | ದಾಖಲಿಸಿದ ಪ್ರಕರಣಗಳ ಸಂಖ್ಯೆ | | |
|---|---|---|---|---|
| | | ಕ.ಅ.ಕಾಯ್ದೆ 1965 ರ ಕಲಂ 32,34 | ಕ.ಅ.ಕಾಯ್ದೆ 1965ರ ಕಲಂ 15(ಎ) | ಒಟ್ಟು |
| 1. | ಬೀದರ್ | 315 | 2220 | 2535 |
| 2. | ಕಲ್ಬುರ್ಗಿ | 496 | 3118 | 3614 |
| 3. | ಯಾದಗಿರಿ | 346 | 1455 | 1801 |
| 4. | ರಾಯಚೂರು | 436 | 1997 | 2433 |
| 5. | ಕೊಪ್ಪಳ | 143 | 1559 | 1702 |
| 6. | ಬಳ್ಳಾರಿ | 387 | 3537 | 3924 |
| 7. | ವಿಜಯನಗರ | 01 | 40 | 41 |
| | **ಒಟ್ಟು** | **2,124** | **13,926** | **16,050** |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಆ | ಇಲ್ಲಿಯವರೆಗೆ ಎಷ್ಟು ಮೌಲ್ಯದ ಅಕ್ರಮ ಮದ್ಯ ವಶಕ್ಕೆ ಪಡೆಯಲಾಗಿದೆ ಹಾಗೂ ಇಲ್ಲಿಯವರೆಗೆ ಎಷ್ಟು ಜನರ | ಅಕ್ರಮ ಮದ್ಯ ಮಾರಾಟದ ಪ್ರಕರಣಗಳಿಂದ 24.28 ಕೋಟಿ ರೂಪಾಯಿಗಳ ಮೌಲ್ಯದ ವಸ್ತುಗಳನ್ನು ಜಪ್ತುಪಡಿಸಲಾಗಿದೆ ಹಾಗೂ ಈ ಸಂಬಂಧ 28,200 ಆರೋಪಿತರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದ್ದು, ಜಿಲ್ಲಾವಾರು ವಿವರ ಕೆಳಕಂಡಂತಿದೆ. |

<table>
<tr>
<td></td>
<td>ವಿರುದ್ಧ ಪ್ರಕರಣ ದಾಖಲಾಗಿವೆ; (ಜಿಲ್ಲಾವಾರು ವಿವರ ನೀಡುವುದು)</td>
<td>
<table>
<tr><th>ಕ್ರಸಂ</th><th>ಕಲ್ಯಾಣ ಕರ್ನಾಟಕ ಜಿಲ್ಲೆಗಳು</th><th>ಜಪ್ತುಪಡಿಸಿದ ವಸ್ತುಗಳ ಮೌಲ್ಯ (ಕೋಟಿ ರೂ.ಗಳಲ್ಲಿ)</th><th>ಆರೋಪಿತರ ಸಂಖ್ಯೆ</th></tr>
<tr><td>1.</td><td>ಬೀದರ್</td><td>3.33</td><td>4227</td></tr>
<tr><td>2.</td><td>ಕಲ್ಬುರ್ಗಿ</td><td>3.67</td><td>5526</td></tr>
<tr><td>3.</td><td>ಯಾದಗಿರಿ</td><td>4.87</td><td>2712</td></tr>
<tr><td>4.</td><td>ರಾಯಚೂರು</td><td>4.89</td><td>4770</td></tr>
<tr><td>5.</td><td>ಕೊಪ್ಪಳ</td><td>1.49</td><td>3743</td></tr>
<tr><td>6.</td><td>ಬಳ್ಳಾರಿ</td><td>2.88</td><td>7101</td></tr>
<tr><td>7.</td><td>ವಿಜಯನಗರ</td><td>3.15</td><td>121</td></tr>
<tr><td colspan="2">ಒಟ್ಟು</td><td>24.28</td><td>28200</td></tr>
</table>
</td>
</tr>
<tr>
<td>ಇ</td>
<td>ರಾಜ್ಯದಲ್ಲಿ ಎಷ್ಟು ವಿವಿಧ ಮದ್ಯದಂಗಡಿಗಳಿಗೆ ಪರವಾನಿಗೆಗಳನ್ನು ನೀಡಲಾಗುತ್ತಿದೆ; ಈ ಪರವಾನಿಗೆ ಪಡೆಯಲು ಇರುವ ಮಾನದಂಡಗಳೇನು?</td>
<td>1992ನೇ ಸಾಲಿನಿಂದ ಹೊಸದಾಗಿ ಸಿಎಲ್–2 ಹಾಗೂ ಸಿಎಲ್–9 ಸನ್ನದನ್ನು ನೀಡಲು ಸರ್ಕಾರ ನಿರ್ಬಂಧಿಸಿರುವುದರಿಂದ ಅಬಕಾರಿ ಇಲಾಖೆಯಿಂದ ಹೊಸದಾಗಿ ಸಿಎಲ್–2 ಮತ್ತು ಸಿಎಲ್–9 ಸನ್ನದುಗಳ ಮಂಜೂರಾತಿ ನೀಡಲಾಗುತ್ತಿಲ್ಲ.<br><br>ಪ್ರಸ್ತುತ, ಸಿಎಲ್–4, ಸಿಎಲ್–6ಎ, ಸಿಎಲ್–7, ಸಿಎಲ್–8, ಸಿಎಲ್–7ಎ, ಸಿಎಲ್–11ಸಿ, ಫಾರ್ಮ್ ಸಿಎಲ್–16, ಫಾರ್ಮ್ ಸಿಎಲ್–17 ಮತ್ತು ಫಾರ್ಮ್ ಸಿಎಲ್–18 ಸನ್ನದುಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 3 ಮತ್ತು 5ರಡಿ ಹೊಸದಾಗಿ ಮಂಜೂರು ಮಾಡಲಾಗುತ್ತಿದೆ. ಸದರಿ ಸನ್ನದುಗಳಿಗೆ ಸಂಬಂಧಪಟ್ಟಂತೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ರ ನಿಯಮ 8, 8(ಎ) ರಲ್ಲಿ ನಿಗಧಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳನ್ನು ಅರ್ಜಿದಾರರಿಂದ ಪಾವತಿಸಿಕೊಂಡು ಅರ್ಜಿ ಪಡೆಯಲಾಗುತ್ತದೆ. ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ–5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು</td>
</tr>
</table>

| | | |
|---|---|---|
| | | ಇರುವಂತಿಲ್ಲ. ಯಾವುದೇ ರಾಜ್ಯ ಸರ್ಕಾರದ / ಕೇಂದ್ರ ಸರ್ಕಾರದ ಕಛೇರಿಯಾಗಲೀ ಅಥವಾ ಸ್ಥಳೀಯ ಸಂಸ್ಥೆಗಳ ಕಛೇರಿಯಾಗಲೀ ಅವುಗಳ ಮುಖ್ಯಸ್ಥರು ಗ್ರೂಪ್ "ಎ" ಅಥವಾ ಗ್ರೂಪ್ "ಬಿ" ಅಧಿಕಾರಿಯಾಗಿದ್ದಲ್ಲಿ ಆ ಕಛೇರಿಯು ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುತ್ತದೆ.<br><br>ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:12164–12166/2016ರ ದಿನಾಂಕ:31.03.2017ರಲ್ಲಿ ಆದೇಶಿಸಿದಂತೆ 20,000ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ / ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.<br><br>ಮಾನ್ಯ ಸರ್ವೋಚ್ಛ ನ್ಯಾಯಾಲಯದ ಎಸ್.ಎಲ್.ಪಿ (ಸಿವಿಲ್) ಸಂಖ್ಯೆ:10243/2017ರಲ್ಲಿನ ದಿನಾಂಕ:11.07.2017ರ ಆದೇಶದಲ್ಲಿ ನೀಡಿದ ಸ್ಪಷ್ಟೀಕರಣದಂತೆ, ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿ ಹಾದು ಹೋಗುವ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿರುವ ಸನ್ನದುಗಳನ್ನು ನಿಯಮಾನುಸಾರ ನವೀಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಸರ್ಕಾರದ ಪತ್ರ ಸಂಖ್ಯೆ: ಆಇ 36 ಇಡಬ್ಲ್ಯೂಪಿ 2018, ದಿನಾಂಕ: 06.08.2020ರಲ್ಲಿ 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯಿತಿ/ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್–6ಎ ಮತ್ತು ಸಿಎಲ್–7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ (5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ |